ಶ್ರೀ ಎ.ಬಿ. ಜಕನೂರ್.—ನಾನು ಈಗಾಗಲೇ ಹೇಳಿದ್ದೇನೆ. ಹಿಂದಿನವರಿಂದ ಲೋಪದೋಷ ಆಗಿರಬೇಕು, ಅಧಿಕಾರಿಗಳಿದ್ದೂ ಲೋಪದೋಷ ಆಗಿರಬೇಕು, ಮ್ಯಾನೇಜ್‌ಮೆಂಟ್‌ದೂ ಆಗಿರಬೇಕು. ನಾವು ಎಲ್ಲರಿಗೂ ತಾಕೀತು ಮಾಡಿದ್ದೇವೆ ರೀಜನಲ್ ಬೋರ್ಡ್ ಛೇರ್ಮನ್ ನಾನೇ ಇದ್ದೇನೆ, ಕೇಂದ್ರ ಸರ್ಕಾರದವರು ಮಾಡಿದ್ದಾರೆ. ಪ್ರಾವಿಡೆಂಟ್ ಫಂಡ್ ಕಮಿಷನರಿಗೆ, ಇನ್ಸ್‌ಪೆಕ್ಟರಿಗೆ ಎಲ್ಲರಿಗೂ ತಾಕೀತು ಮಾಡಿದ್ದೇನೆ. ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ಇಷ್ಟು ಹೇಳಿದರೂ ಮಾನ್ಯ ಸದಸ್ಯರು ನಮಗೆ ಸಮಾಧಾನವಾಗುವುದಿಲ್ಲವೆಂದು ಹೇಳಿದರು, ನಮಗೆ ಎಂದಿಗೂ ಸಮಾಧಾನ ವಾಗುವುದಿಲ್ಲ. ವಿರೋಧಪಕ್ಷದವರಿಗೆ ಸಮಾಧಾನ ಎಂದೂ ಆಗುವುದಿಲ್ಲ. ಕಾರ್ಮಿಕರಿಗೆ ಸಮಾಧಾನ ಮಾಡುವುದು ನನ್ನ ಕರ್ತವ್ಯವಿದೆ.

ಶ್ರೀ ಎಂ.ಸಿ. ನಾನಯ್ಯ.—ವಿರೋಧಪಕ್ಷದವರಿಗೆ ಸಮಾಧಾನವಾಗುವುದಿಲ್ಲ ಎಂದು ಹೇಳಬೇಡಿ. ಪ್ರಾವಿಡೆಂಟ್ ಫಂಡ್‌ಗೆ ಕಾರ್ಮಿಕರು ಕೊಟ್ಟಂಥ ಹಣವನ್ನು ಹಿಂದಕ್ಕೆ ಕೊಡುವುದಿಲ್ಲ ಎಂದು ಹೇಳುವು ದಿದ್ದರೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ. ವಿರೋಧಪಕ್ಷಗಳಿಗೆ ಸಮಾಧಾನವಾಗುವುದಿಲ್ಲ ಎನ್ನತಕ್ಕ ಮಾತನ್ನು ತಾವು ಆಡಬೇಡಿ. ಪ್ರಾವಿಡೆಂಟ್ ಫಂಡ್‌ಗೆ ಕಾರ್ಮಿಕರು ತಂತಿಗೆ ಕೊಟ್ಟಿದ್ದಾರೆ.

ಶ್ರೀ ಎ.ಬಿ. ಜಕನೂರ್.—ಮಾನ್ಯ ಅಧ್ಯಕ್ಷರೆ, ನಾನು ಆಗಲೇ ಹೇಳಿದೆ. ನಾವು ಇಷ್ಟೆಲ್ಲಾ ಪ್ರಯತ್ನ ಮಾಡಿದ್ದೇವೆ. ಯಾರಾದರೂ ಇಂಥವರಿಂದ ಅನ್ಯಾಯವಾಗಿದೆಯೆಂದು ಹೇಳಿದರೆ ಕ್ರಮ ತೆಗೆದುಕೊಳ್ಳುತ್ತೇನೆ ಮಾನ್ಯ ಸದಸ್ಯರು ಸಮಾಧಾನ ಮಾಡಿಕೊಳ್ಳಿ. ಕಾರ್ಮಿಕರಿಗೆ ನಾನು ಹೇಳುತ್ತೇನೆ. ಧರಣಿ ಕೂಡಬೇಡಿ, ಬೇಗನೆ ತಮ್ಮ ತಂತಿಗೆಯನ್ನು ಕೊಡಿಸುತ್ತೇನೆಂದು ಅವರಿಗೆ ತಿಳಿಸುತ್ತೇನೆ.

ಶ್ರೀ ಭಾವೂರಾವ್ ದೇಶಪಾಂಡೆ.—ರಿಜರ್ವ್ ಫಂಡ್‌ನಿಂದ ಇನ್ನು ೩-೪ ದಿವಸಗಳಲ್ಲಿ ವ್ಯವಸ್ಥೆ ಆಗದೇಹೋದರೆ ನಾವು ಇಲ್ಲಿಂದ ವಾಕೌಟ್ ಮಾಡುತ್ತೇವೆ. ರಿಜರ್ವ್ ಫಂಡ್‌ನಿಂದ ಕೊಡಲಿಕ್ಕೆ ಅಧಿಕಾರ ಇದೆ. ಅದಕ್ಕೆ ಏನಾದರೂ ಅಡ್ಡಿ ಇದ್ದರೆ ಹೇಳಲಿ, ರಿಜರ್ವ್ ಫಂಡ್‌ನಿಂದ ಹಣ ಕೊಡಲಿ, ಏಕೆ ಕೊಡಬಾರದು?

ಶ್ರೀ ಎ.ಬಿ. ಜಕನೂರ್.—ರಿಜರ್ವ್ ಫಂಡ್‌ನಿಂದಾಗಲಿ, ಎಲ್ಲಿಂದಾಗಲಿ, ಏನಾದರೂ ಮಾಡಿ ಆವರಿಗೆ ಸಲ್ಲತಕ್ಕ ಹಣವನ್ನು ಕೊಡಿಸತಕ್ಕ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಭಾವೂರಾವ್ ದೇಶಪಾಂಡೆ.—ರಿಜರ್ವ್ ಫಂಡ್‌ನಿಂದ ಹಣ ಕೊಡಲಿ ಆಮೇಲೆ ವಸೂಲು ಮಾಡಿಕೊಳ್ಳಿ.

ಶ್ರೀ ಹೆಚ್. ಗಂಗಾಧರನ್.—ಇನ್ನು ಮೂರು ದಿವಸಗಳಲ್ಲಿ ಆ ಕೆಲಸ ಮಾಡಿಬಿಡಿ.

೩೧೨ನೇ ನಿಯಮದ ಮೇರೆಗೆ:

ಮಂಡಕೇರಿ ಪಟ್ಟಣಕ್ಕೆ ಉತ್ತಮ ನೀರು ಸರಬರಾಜು ಮಾಡುವ ಬಗ್ಗೆ

† ಶ್ರೀ ಎಂ.ಸಿ. ನಾನಯ್ಯ.—ಮಾನ್ಯ ಅಧ್ಯಕ್ಷರೆ, ಈ ನಿಯಮ ೩೧೨ರ ಕೆಳಗೆ ತಂದಿರತಕ್ಕ ವಿಷಯಕ್ಕೆ ಉತ್ತರ ಕೊಡತಕ್ಕ ಮಂತ್ರಿಗಳಲ್ಲಿ ಈಗ ಇದಕ್ಕೆ ಯಾರು ಉತ್ತರ ಕೊಡುತ್ತಾರೆಂದು ಹೇಳ ಬೇಕು. ಮಾನ್ಯ ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಗಳು ಕಾಣುವುದಿಲ್ಲ. ಮಾನ್ಯ ರಾಮಯ್ಯ ನವರು ಉತ್ತರ ಕೊಡುತ್ತಾರೆಯೇ. ತಾವು ಉತ್ತರ ಕೊಡಬೇಕು ಮತ್ತು ಅದಕ್ಕೆ ಸರಿಯಾದಂಥ ಸಮಾಧಾನ ಕೊಡಬೇಕು,

ಶ್ರೀ ಬಿ. ರಾಮಯ್ಯ.—ತಮ್ಮಿಂದ ಸುದ್ದಿ ಬಂದಮೇಲೆ ೨೪ ಗಂಟೆ ಮುಂಚಿತವಾಗಿ ಸಾಕಷ್ಟು ಮಾಹಿತಿ ತರಿಸಿಕೊಂಡಿದ್ದೇನೆ. ಮಾನ್ಯ ಸದಸ್ಯರಾದ ಧರ್ಮಸಿಂಗ್‌ರವರು ಬರಬೇಕಾಗಿತ್ತು. ಆದರೆ ಅವರ ಮಗನಿಗೆ ಆಪರೇಷನ್ ಇರುವುದರಿಂದ ಅವರು ಹೋಗಬೇಕಾಗಿದೆ.

(ಶ್ರೀ ಎಂ. ಚಂದ್ರಶೇಖರ್.—ಅವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಎಂ.ಸಿ. ನಾನಯ್ಯ.—ಮಾನ್ಯ ಅಧ್ಯಕ್ಷರೆ, ನನಗೆ ಬಹಳ ಆನಂದವಾಯಿತು. ಮಾನ್ಯ ಮಂತ್ರಿಗಳು ೨೪ ಗಂಟೆ ಮುಂಚಿತವಾಗಿ ಮಾಹಿತಿಯನ್ನು ತರಿಸಿಕೊಂಡಿದ್ದೇನೆಂದು ಹೇಳಿದರು. ಆದರೆ ಇವತ್ತು ಬೆಳಿಗ್ಗೆ ಎಂಟೂವರೆ ಗಂಟೆಗೆ ನಾನು ಮಂಡಕೇರಿಯಿಂದ ಮಾಹಿತಿಯನ್ನು ತರಿಸಿಕೊಂಡಿದ್ದೇನೆ. ಆ ಮಾಹಿತಿಯನ್ನು ತಮ್ಮ ಮುಂದಿಡುತ್ತೇನೆ. ಮಂಡಕೇರಿ ಕೊಡಗಿನ ಒಂದು ಮುಖ್ಯ ಪಟ್ಟಣ,

ಆದುದರಿಂದ ಅದನ್ನು ಪುರಾಸಿ ಕೇಂದ್ರವೆಂದು ಸರ್ಕಾರ ಘೋಷಣೆ ಮಾಡಿ, ಅದಕ್ಕೆ ಸಲ್ಲಬೇಕಾದ ಎಲ್ಲಾ ಸೌಲಭ್ಯಗಳನ್ನು ಕೊಡಬೇಕು ಎಂದು ತಾವು ಪ್ರಯತ್ನ ಮಾಡಿದ್ದೀರಿ ಇದರ ಜೊತೆಗೆ ಟ್ಯೂರಿಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನವರು ೩೬ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಒಂದು ದೊಡ್ಡ ವ್ಯಾಲಿ ವ್ಯೂ ಟೂರಿಸ್ಟ್ ಹೋಟೆಲನ್ನು ಕಟ್ಟಿದ್ದಾರೆ. ಮಡಕೇರಿ ನಗರದ ಜನಸಂಖ್ಯೆ ೨೪ ಸಾವಿರ. ಈ ೨೪ ಸಾವಿರ ಜನಸಂಖ್ಯೆ ಇರತಕ್ಕಂಥ ಮುಖ್ಯ ಪಟ್ಟಣವಾದಂಥ ಮಡಕೇರಿಗೆ ಅದರಲ್ಲೂ ಮಾನ್ಯ ಮಂಖ್ಯಮಂತ್ರಿಗಳು ಬರುತ್ತಾ ಇರತಕ್ಕಂಥ ಜಿಲ್ಲೆಯ ಮುಖ್ಯ ಪಟ್ಟಣವಾದಂಥ ಮಡಕೇರಿ ನಗರಕ್ಕೆ ಉತ್ತಮವಾದಂಥ ನೀರನ್ನು ಸರಬರಾಜು ಮಾಡಲಿಕ್ಕೆ ಆರ್ಹತೆ ಇಲ್ಲದಂಥ ಒಂದು ಇಲಾಖೆ ಇದ್ದರೆ ಆ ಇಲಾಖೆ ಏಕೆ ಇರಬೇಕು ಎಂದು ನಾನು ಇವತ್ತು ಪ್ರಶ್ನೆ ಮಾಡುತ್ತಾ ಇದ್ದೇನೆ. ಇವತ್ತಿನದಿವಸ ಮಡಕೇರಿ ನಗರದಲ್ಲಿ ೩೬ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿರತಕ್ಕ ಒಂದು ವಾಟರ್ ಸಪ್ಲೈ ಸ್ಕೀಂ ಇಲ್ಲಿ ಬರುತ್ತಾ ಇರತಕ್ಕಂಥ ನೀರು ಮಡಕೇರಿ ನಗರದಿಂದ ನಾಲ್ಕೂವರೆ ಮೈಲಿ ದೂರದಲ್ಲಿರತಕ್ಕಂಥ ಗಾಳಿಬೀರು ಎಂಬ ಗ್ರಾಮದಿಂದ ಬರುತ್ತಾ ಇದೆ. ಅದು ಗದ್ದೆಗಳ ಮಧ್ಯದಲ್ಲಿ ಹರಿದು ಹೋಗುತ್ತಾ ಇರತಕ್ಕಂಥ ಒಂದು ಚಿಕ್ಕ ನದಿ, ಅದಕ್ಕೆ ಒಂದು ದೊಡ್ಡ ಕಟ್ಟೆ ಹಾಕಿ, ನೀರನ್ನು ಸಂಗ್ರಹಣೆ ಮಾಡಿ ಅಲ್ಲಿಂದ ನೀರನ್ನು ಪಂಪ್ ಮಾಡುತ್ತಾ ಇದ್ದಾರೆ. ಮಡಕೇರಿ ನಗರಕ್ಕೆ ಕಳೆದ ಒಂದು ವರ್ಷದಿಂದ ರಾ ವಾಟರನ್ನು ಸಪ್ಲೈ ಮಾಡುತ್ತಾ ಇದ್ದಾರೆ. ಪ್ರೊಟೆಕ್ಟೆಡ್ ವಾಟರ್ ಸಪ್ಲೈ ಮಾಡುತ್ತಾ ಇಲ್ಲ. ತಮಗೆ ಗೊತ್ತಿರುವ ಹಾಗೆ ಕಳೆದ ೬ ವರ್ಷಗಳಿಂದ, there is no protected water supply. Chlorination is not being done. It is one of the ingredients of protected water. ಕಳೆದ ೬ ವರ್ಷ ಅಥವಾ ೭ ವರ್ಷಗಳಿಂದ ಮಡಕೇರಿ ನಗರಕ್ಕೆ ಸರಬರಾಜು ಮಾಡುತ್ತಾ ಇರತಕ್ಕಂಥ ನೀರಿಗೆ ಕ್ಲೋರಿನೇಷನ್ ಇಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಕ್ಲೋರಿನೇಷನ್ ಪ್ಲಾಂಟ್ ಇಲ್ಲ. ೬ ವರ್ಷಗಳ ಹಿಂದೆ ಯಾವ ಕ್ಲೋರಿನೇಷನ್ ಪ್ಲಾಂಟ್ ಹಾಳಾಗಿ ಹೋಯಿತು? ಆ ಪ್ಲಾಂಟನ್ನು ಸರಿ ಮಾಡಲಿಕ್ಕೆ ಇರತಕ್ಕಂಥ ಪುರಸಭೆಯಾಗಲಿ, ಸರ್ಕಾರವಾಗಲಿ, ಕರ್ನಾಟಕ ವಾಟರ್ ಸಪ್ಲೈ ಬೋರ್ಡ್‌ನವರಾಗಲಿ ಕಾರ್ಯಕ್ರಮ ಕೈಗೊಂಡಿಲ್ಲ. ಹಾಗಾದರೆ ಮಡಕೇರಿ ನಗರಕ್ಕೆ ಸರಬರಾಜು ಮಾಡುತ್ತಾ ಇರತಕ್ಕಂಥ ನೀರು ಯಾವುದು, ಯಾವ ನೀರು ಎಂದು ದಯವಿಟ್ಟು ಹೇಳಿ.

ಈ ನಮ್ಮ ಶುದ್ಧೀಕರಣ ಕೇಂದ್ರವೇನಿದೆ ಇದು ನಮ್ಮ ಮನೆಯಿಂದ ೩ ಫರ್ಲಾಂಗ್ ದೂರದಲ್ಲಿದೆ. ಪ್ರತಿ ದಿವಸ ನಾನು ಬೆಳಿಗ್ಗೆ ಅಲ್ಲಿಯವರೆಗೂ ವಾಕಿಂಗ್ ಹೋಗತಕ್ಕ ಸಂದರ್ಭದಲ್ಲಿ ಅಲ್ಲಿ ನಡೆಯತಕ್ಕ ವ್ಯವಹಾರವನ್ನು ನೋಡಿ ಮಡಿಕೇರಿ ಪುರಸಭೆಯ ಅಧಿಕಾರಿಗಳವರ ಗಮನಕ್ಕೆ ತಂದಿದ್ದೇನೆ, ಜಿಲ್ಲಾಧಿಕಾರಿಯವರ ಗಮನಕ್ಕೂ ತಂದಿದ್ದೇವೆ, ಮಡಿಕೇರಿ ನಗರಕ್ಕೆ ಪ್ರೊಟೆಕ್ಟೆಡ್ ವಾಟರ್ ಸಪ್ಲೈ ಮಾಡುತ್ತಿಲ್ಲ ಎನ್ನುವ ವಿಷಯವನ್ನು ತಿಳಿಸಿದ್ದೇನೆ. ಅಲ್ಲಿ ನೀರನ್ನು ಶುದ್ಧೀಕರಣ ಮಾಡುತ್ತಿರುವುದು ಕೇವಲ ಆಲಂ ಎನ್ನತಕ್ಕ ಒಂದು ವಸ್ತುವಿನಿಂದ ಮಾತ್ರ ಮಾಡುತ್ತಿದ್ದಾರೆ ಮತ್ತೆ ಬೇರೆ ಏನು ಕೆಮಿಕಲ್ಸ್ ಇದೆ ಅದನ್ನು ಅಲ್ಲಿ ಅವರು ಉಪಯೋಗಿಸುತ್ತಿಲ್ಲ. ಕ್ಲೋರಿನೇಷನ್ ಮಾಡದೇ ಮಡಿಕೇರಿ ನಗರದಲ್ಲಿರತಕ್ಕ ೨೯ ಸಾವಿರ ಜನರಿಗೆ ಅದೇ ನೀರನ್ನು ವಿತರಣೆ ಮಾಡುತ್ತಿದ್ದಾರೆ. ಇದು ಯಾವ ಧರ್ಮ ಹೇಳಿ ಸ್ವಾಮಿ ? ಮಡಿಕೇರಿ ವಾಟರ್ ಸಪ್ಲೈ ಸ್ಕೀಂನಲ್ಲಿ ಎರಡು ಫಿಲ್ಟರ್‌ಬೆಡ್ ಇದೆ. ಅಲ್ಲಿಯ ಒಂದು ಫಿಲ್ಟರ್ ಬೆಡ್‌ಕೆಟ್ಟು ಇಲ್ಲಿಗೆ ನಾಲ್ಕು ತಿಂಗಳು ಆಯಿತು. ಅದಕ್ಕೆ ೫೦೦-೦೦ ರೂ.ಗಳನ್ನು ಖರ್ಚು ಮಾಡುವುದಕ್ಕೆ ಯೋಗ್ಯತೆ ಇಲ್ಲವೇ ? ಅಷ್ಟೂ ಯೋಗ್ಯತೆ ಇಲ್ಲದಿದ್ದರೆ ಆ ಇಲಾಖೆಯವರಾದರೂ ಏತಕ್ಕೆ ಇರಬೇಕೆಂಬುದು ಕೇಳುತ್ತೇನೆ, ಆದುದರಿಂದ ಇವತ್ತು ಮಡಿಕೇರಿ ನಗರಕ್ಕೆ ಫಿಲ್ಟರೇಷನ್ ಆಗದೇ ಇರತಕ್ಕಂಥ ನೀರನ್ನು ಕೊಡುತ್ತಿರುವುದಕ್ಕೆ ಯಾರದು ಹೊಣೆ? ಇನ್ನು ಈ ನಗರಕ್ಕೆ ಸರಬರಾಜು ಆಗತಕ್ಕ ವಾಟರ್‌ಗೆ ನಾಲ್ಕು ಮೈಲಿ ದೂರದಲ್ಲಿ ಗಾಳಿಬೀರು ನಲ್ಲಿ ಕಟ್ಟಿ ಹಾಕಿದ್ದಾರೆ. ಅದು ಹಾಕಿ ಎಂಟು ವರ್ಷಗಳಾಯಿತು. ಈ ತಪರಿಗೆ ಗೊತ್ತಿರಬಹುದು. ಈ ತರಹ ಕಟ್ಟೆ ಕಟ್ಟಿ ನೀರನ್ನು ಸರಬರಾಜು ಮಾಡತಕ್ಕ ಸಂದರ್ಭದಲ್ಲಿ ಅಲ್ಲಿರತಕ್ಕ ಸ್ಲ್ಯುಯಿಸ್ ವಾಲ್ವ್ ಮತ್ತು ಸ್ಲ್ಯೂಯಿಸ್ ಗೇಟ್ ಏನಿದೆ ಅದನ್ನು ತೆಗೆದು ಕೆಳಭಾಗದಲ್ಲಿರತಕ್ಕ ಮಣ್ಣು ಮತ್ತು ಶಿಲ್ಟ್‌ನ್ನು ತೆಗೆಯುವುದಕ್ಕೋಸ್ಕರವಾಗಿ ಇರತಕ್ಕುದು. ಅದನ್ನು ಪ್ರತಿವರ್ಷವೂ ತೆಗೆದು ಹೊಸ ನೀರನ್ನು ಶೇಖರಣೆ ಮಾಡಿ ಹಳೇ ನೀರನ್ನು ವಾಶೌಟ್ ಮಾಡಬೇಕು. ಆದರೆ ಇವತ್ತಿಗೆ ೧೨ ವರ್ಷಗಳಾಗಿರಬಹುದು. ಆ ಸ್ಲ್ಯುಯಿಸ್ ಗೇಟನ್ನು ಇವತ್ತಿನವರೆಗೂ ತೆಗೆದಿಲ್ಲ. ಇದನ್ನು ಅಧಿಕಾರಿಗಳ ಗಮನಕ್ಕೆ ತಂದಿದ್ದಾಗಿದೆ, ಆದರೆ ಇಲ್ಲಿಯವರೆಗೂ ಯಾವುದೇ ಕ್ರಮವನ್ನು ಅಧಿಕಾರಿಗಳು ಕೈಗೊಂಡಿಲ್ಲ. ೧೨ ವರ್ಷಗಳಿಂದ ಇಲ್ಲಿಯವರೆಗೆ ಆ ಸ್ಲ್ಯುಯಿಸ್ ಗೇಟನ್ನು ತೆಗೆಯದೇ ಅದೇ ಹಳೆಯ ನೀರನ್ನೇ ಶೇಖರಣೆ

ಮಾಡಿಟ್ಟುಕೊಂಡಿದ್ದಾರೆ. ಹೀಗಾದರೆ ನೀರು ಯಾವ ಮಟ್ಟದಲ್ಲಿ ಶುದ್ಧವಾಗಿರಬಹುದೆಂಬುದನ್ನು ತಾವು ಯೋಚನೆ ಮಾಡಿ ನೋಡಿ. ಇದನ್ನು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದಿದ್ದಾಗಿದೆ, ಕರ್ನಾಟಕ ವಾಟರ್ ಸಪ್ಲೈ ಬೋರ್ಡಿನ ಅಧಿಕಾರಿಗಳವರಿಗೆ ಬರೆದು ತಿಳಿಸಿದ್ದೇನೆ, ಮತ್ತು ಪುರಸಭೆಗಳವರ ಗಮನಕ್ಕೆ ತಂದಿದ್ದೇನೆ. ಆದಾಗ್ಯೂ ಸಹ ಇಲ್ಲಿಯವರೆಗೆ ಯಾರೂ ಕ್ರಮವನ್ನು ಕೈಗೊಂಡಿಲ್ಲ, ಏತಕ್ಕೋಸ್ಕರ ಸೂಕ್ತವಾದ ಕ್ರಮವನ್ನು ಕೈಗೊಂಡಿಲ್ಲವೆಂದು ನಾನು ಕೇಳಬಯಸುತ್ತೇನೆ. ಈ ನಮ್ಮ ಕರ್ನಾಟಕ ವಾಟರ್ ಸಪ್ಲೈ ಬೋರ್ಡ್ ಏನಿದೆ ಅಲ್ಲಿ ಒಬ್ಬ ಅಸಿಸ್ಟೆಂಟ್ ಇಂಜಿನಿಯರ್ ಏನಿದ್ದಾರೆ, ಅವರ ಆಫೀಸ್ ಇರತಕ್ಕಂಥದ್ದು ಕುಶಾಲನಗರದಲ್ಲಿ ಆದರೆ ಅವರ ಮನೆ ಇರತಕ್ಕುದ್ದು ಮೈಸೂರಿನಲ್ಲಿ. ವಾರಕ್ಕೊಂದು ಸಾರಿಯೋ ಅಥವಾ ತಿಂಗಳಿಗೊಂದು ಸಾರಿಯೋ ಕುಶಾಲನಗರಕ್ಕೆ ಬಂದು ನೋಡಿಕೊಂಡು ಬಸ್ ಹತ್ತಿ ಮೈಸೂರಿಗೆ ಹೊರಟು ಹೋಗುತ್ತಾರೆ. ಇಂಥಾ ಅಸಿಸ್ಟೆಂಟ್ ಇಂಜಿನಿಯರ್‌ರವರು ಏತಕ್ಕೆ ನೇಮಕ ಮಾಡುತ್ತೀರಾ ಎಂದು ಕೇಳುತ್ತೇನೆ. ಕರ್ನಾಟಕ ವಾಟರ್ ಸಪ್ಲೈ ಬೋರ್ಡಿನ ಆಫೀಸ್ ಒಂದನ್ನು ಮಡಿಕೇರಿಯಲ್ಲಿ ತೆಗೆಯಿರಿ ಎಂದು ನಾವು ಹೇಳುತ್ತಲೇ ಇದ್ದೇವೆ. ಆದರ ಬಗ್ಗೆ ಇನ್ನೂ ಕ್ರಮವನ್ನು ಕೈಗೊಳ್ಳುತ್ತಿಲ್ಲ. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೂ ಕೂಡ ವಿಚಾರಣೆ ಮಾಡುತ್ತಿಲ್ಲ. ಅಲ್ಲಿಯ ಪುರಸಭೆಯವರು ೫ ಲಕ್ಷ ರೂಪಾಯಿಗಳನ್ನು ಇದರಲ್ಲಿ ತೀವಣಿ ಇಟ್ಟಿದ್ದಾರೆ. ಕೆಲವು ಕೆಲಸಕಾರ್ಯಗಳು ಆಗಬೇಕೆಂದು ಹೇಳಿ ೩ ವರ್ಷಗಳಾದರೂ ಆ ಕೆಲಸಗಳನ್ನು ತೆಗೆದುಕೊಂಡಿಲ್ಲ. ಅದು ಏನು ತೋರಿಸುತ್ತದೆ ಎಂದರೆ ಕೆಳಗಿನ ಆಫೀಸರ್‌ಗಳ ಮೇಲೆ ಮೇಲೆ ಮೇಲಿನ ಆಫೀಸರ್‌ಗಳಿಗಾಗಲೀ ಇಲ್ಲವೇ ಸರ್ಕಾರಕ್ಕೇ ಆಗಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳಲು ಆಗದೇ ಇರತಕ್ಕಂಥ ಹತಾಶ ಭಾವನೆಯಲ್ಲಿದ್ದಾರೆಂದು ನನ್ನ ಭಾವನೆ. ಆದರಲ್ಲೂ ಕೊಡಗಿನಿಂದ ಬಂದಿರತಕ್ಕ ಮುಖ್ಯಮಂತ್ರಿಗಳವರ ಸ್ವಂತ ಊರಿನಲ್ಲಿಯೇ ಈ ಪರಿಸ್ಥಿತಿ ಯಾದರೆ ಕರ್ನಾಟಕ ರಾಜ್ಯದ ಇತರ ಭಾಗಗಳಲ್ಲಿ ಏನು ನಡೆಯುತ್ತಿದೆ ಎನ್ನುವುದನ್ನು ನಾವು ಊಹಿಸ ಬಹುದಾಗಿದೆ. ಮಡಿಕೇರಿ ನಗರಕ್ಕೆ ಅನ್‌ಪ್ಯೂಟೆಡ್ ವಾಟರ್ ಸಪ್ಲೈ ಆಗುತ್ತಿದೆ ಎಂದು ನಾನು ಮೊದಲೇ ಏತಕ್ಕೆ ಪ್ರಸ್ತಾಪ ಮಾಡಲಿಲ್ಲವೆಂದರೆ ಜನ ಭಯ ಭೀತ ಬಿದ್ದಾರು ಎನ್ನುವ ಕಾರಣ ಕ್ಕೋಸ್ಕರವಾಗಿ ತಂದಿರಲಿಲ್ಲ. ಆದರೆ ಈಗ ಅದು ಪತ್ರಿಕೆಗಳಲ್ಲಿ ಎಲ್ಲಾ ವರದಿಯಾಗಿ ಮಾನ್ಯ ಮುಖ್ಯ ಮಂತ್ರಿಗಳವರ ಗಮನಕ್ಕೂ ತಿಳಿಸಿದ್ದಾರೆ ಆದುದರಿಂದ ಇವತ್ತಿನ ದಿವಸ ನಾನು ಈವತ್ತು ವಿಧಾನ ಸಭೆಯಲ್ಲಿ ಪ್ರಸ್ತಾಪ ಮಾಡಬೇಕಾಗಿ ಬಂತು. ಆದುದರಿಂದ ಸರ್ಕಾರ ಇದರ ಬಗ್ಗೆ ಕೂಡಲೇ ಸೂಕ್ತವಾದ ಕಾರ್ಯಕ್ರಮವನ್ನು ಕೈಗೊಂಡು ಸಂಬಂಧಪಟ್ಟ ಅಧಿಕಾರಿಗಳು ಯಾರಿದ್ದಾರೆ ಅವರಿಗೆ ಕೂಡಲೇ ತಿಳಿಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಭರವಸೆ ಕೊಡುತ್ತೀರಾ ?

ಇನ್ನು ಎರಡನೆಯದಾಗಿ ೨೦ ಸಾವಿರ ಜನಸಂಖ್ಯೆ ಇರತಕ್ಕಂಥ ಮಡಿಕೇರಿ ನಗರಕ್ಕೆ ಸಮರ್ಪಕ ವಾದ ನೀರು ಪೂರೈಕೆಯಾಗುತ್ತಿಲ್ಲ. ಸಮಯಕ್ಕೆ ಸರಿಯಾಗಿ ನೀರು ಪೂರೈಕೆಯಾಗುತ್ತಿಲ್ಲ ಒಂದೊಂದು ಒಂದೊಂದು ಕಡೆ ದಿನಕ್ಕೆ ಒಂದು ಕೊಡ ನೀರು ಬರುತ್ತಿಲ್ಲ. ಕೊಡುತ್ತಿರುವ ನೀರು ಕೂಡ ಶುದ್ಧಿ ಯಾಗದೇ ಇರತಕ್ಕಂಥ ನೀರನ್ನು ಒಂದೊಂದು ಗಂಟೆಯವರೆಗೆ ಮಾತ್ರ ಸಪ್ಲೈ ಮಾಡುತ್ತಿದ್ದಾರೆ. ಇವತ್ತು ಮುಖ್ಯಮಂತ್ರಿಗಳವರು ಬಂದಿರತಕ್ಕ ಜಿಲ್ಲೆಯಲ್ಲಿಯೇ ಹೀಗಾದರೆ ಬೇರೆ ಭಾಗಗಳಲ್ಲಿ ನೀರು ಹೇಗೆ ಪೂರೈಕೆಯಾಗುತ್ತಿದೆಯೋ ದೇವರಿಗೇ ಗೊತ್ತು. ಮಾನ್ಯ ಶ್ರೀ ಬೇಗಾನೆ ರಾಮಯ್ಯನವರ ವಿಚಾರದಲ್ಲಿ ಹೇಗಿದೆಯೋ ನನಗೆ ಗೊತ್ತಿಲ್ಲ. ಆದುದರಿಂದ ಮಾನ್ಯ ಮಂತ್ರಿಗಳವರು ಸಂಬಂಧಪಟ್ಟ ಅಧಿಕಾರಿಗಳನ್ನು ಕೂಡಲೇ ಕರಿಸಿ ಮಡಿಕೇರಿ ನಗರದ ಜನತೆಗೆ ಶುದ್ಧೀಕರಣ ಮಾಡಿದ ನೀರನ್ನು ಸಪ್ಲೈ ಮಾಡುವ ಬಗ್ಗೆ ಮತ್ತು ಸ್ಲುಯಿಸ್ ಗೇಟನ್ನು ಕಳೆದ ೧೦-೧೨ ವರ್ಷಗಳಿಂದ ತೆಗೆಯದೇ ಏನು ಆಲ್ಲಿ ಮಣ್ಣು ಶಿಲ್ಟ್ ತುಂಬಿಕೊಂಡಿದೆ ಅದನ್ನು ಎತ್ತಿ ತೆಗೆದು ಹಾಕುವ ಬಗ್ಗೆ ತಿಳಿಸಬೇಕು ಮತ್ತು ತಾವು ನಾನು ಕೇಳಿರುವ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರವನ್ನು ಕೊಟ್ಟರೆ ನನ್ನ ಮನಸ್ಸಿಗೆ ಸಮಾಧಾನ ವಾದರೆ ನಿಮಗೆ ಶಹಭಾಸ್ ಗಿರಿಯನ್ನು ಕೊಡುತ್ತೇನೆ ಇಲ್ಲದಿದ್ದರೆ ನಿಮ್ಮ ಉತ್ತರ ಕೊಟ್ಟಾದ ಮೇಲೆ ತರಾಟೆಗೆ ತೆಗೆದುಕೊಳ್ಳುತ್ತೇನೆ.

SRI BEGANE RAMAIAH (Minister for Panchayat Raj and Rural Development).— On behalf of the Minister for Housing and Urban Developenment I make the following statement. I was informed of the Hon'ble Members Notice under Rule 312 yesterday evening. Immediately, I disecussed the matter with the Officers of the

Karnataka Urban Water Supply and Drainage Board and also the Deputy Commissioner, Mercara.

The Deputy Commissioner, Mercara informed me that there are no reports of any body falling sick specifically due to water pollution. She also explained that there are no reports of any specific epedemic in the City of Mercara.

However, on the position of Water Supply in Mercara Town it is to be stated that the Water Supply Scheme costing Rs. 32 lakhs was completed by the Karnataka Urban Water Supply Board and handedover to the Town Municipal Council, Mercara for operation and maintenance as far back as 1976. The population of Mercara Town is 25,000 and due to the increase in the population, water supply has become inadequate and with a view to improve the existing sources of distribution system, a project at a cost of Rs. 16 lakhs has been opproved by the Government and the Water Supply Board is taking necesssary action.

The existing water supply scheme, operated and maintained by the Town Municipal Council comprises of.—

1. Impounding Reservoir,
2. Pumping Station at the Impounding Reservoir,
3. A treatment Plant, and
4. Distribution system.

The storage capacity of Impounding Peservoir is becoming insufficient due to increase in population and therefore action is being taken to increase the storage capacity of Impounding Reservoir and the laying of distribution lines in the newly coming up extensions With this, the water supply position is expected to improve. However, the Municipal Authorities have been cautioned to take immediate necessary steps to ensure distribution of water supply.

ಮಾನ್ಯ ಸದಸ್ಯರಾದ ನಾನಯ್ಯನವರು ಏನು ಕಳಕಳಿ ವ್ಯಕ್ತಪಡಿಸಿದ್ದಾರೆ ಅದನ್ನು ಸರ್ಕಾರ ತೀವ್ರವಾಗಿ ಗಮನಿಸಿದೆ. ಅವರು ಸರ್ಕಾರದ ಮುಂದೆ ಈ ವಿಷಯವನ್ನು ತಂದ ತಕ್ಷಣ ಜಿಲ್ಲಾಧಿಕಾರಿಗಳಿಂದ ಮಾಹಿತಿ ಸಂಗ್ರಹಿಸಿ ಅಲ್ಲಿ ಯಾವುದೇ ರೀತಿಯ ಕಾಯಿಲೆ ಹರಡಿಲ್ಲ ಎಂಬ ವರ್ತಮಾನವನ್ನು ಹೇಳಿದ್ದೇನೆ. ಈ ಸಂದರ್ಭದಲ್ಲಿ ಮಾನ್ಯ ಸದಸ್ಯರು ಏನು ಸೂಕ್ತ ವಿಷಯಗಳನ್ನು ಹೇಳಿದ್ದಾರೆ ಅವನ್ನು ಅಧಿಕಾರಿಗಳ ಗಮನಕ್ಕೆ ತಂದು ಅದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುತ್ತೇವೆ.

† ಶ್ರೀ ಎಂ.ಸಿ. ನಾನಯ್ಯ —ತಾವು ಉತ್ತರ ಕೊಟ್ಟಿದ್ದೀರಿ, ನಿಜ, ಆದರೆ ಮಡಕೇರಿ ನಗರದಲ್ಲಿ ಶುದ್ಧೀಕರಣವಾದ ನೀರನ್ನು ಕುಡಿಯುತ್ತಿದ್ದಾರೆ, ಇದರ ಬಗ್ಗೆ ತಾವು ಏನು ಹೇಳಿಲ್ಲ. ಇದಕ್ಕೆ ಕಾರಣ ಏನು? ಈ ವಿಷಯ ಜಿಲ್ಲಾಧಿಕಾರಿಗಳಿಗೂ ಗೊತ್ತಿದೆ ಮತ್ತು ಪುರಸಭಾ ಆಡಳಿತಾಧಿಕಾರಿಗಳಿಗೂ ಗೊತ್ತಿದೆ. ಕ್ಲೋರಿನೇಷನ್ ಟ್ರೀಟ್‌ಮೆಂಟ್ ಇಲ್ಲದ ನೀರನ್ನು ಕುಡಿಯುವುದಕ್ಕೆ ಸಾಧ್ಯವಿದೆಯೇ? ಮತ್ತು ಅದನ್ನು ಮಾಡುವುದಕ್ಕೆ ವ್ಯವಸ್ಥೆ ಸರಿಯಾಗಿದೆಯೆ ಎಂದು ಕೇಳುತ್ತೇನೆ. ಆ ಅಶುದ್ಧ ನೀರನ್ನು ಕುಡಿದ ಪರಿಣಾಮವಾಗಿ ಅಲ್ಲಿನ ಜನರಿಗೆ ನಾನಾ ರೀತಿಯ ರೋಗಗಳು ತಗುಲಿ ಪ್ರತಿ ದಿವಸ ಆಸ್ಪತ್ರೆಗಳಲ್ಲಿ ಚಿಕಿತ್ಸೆಗಾಗಿ ಕ್ಯೂ ನಿಲ್ಲುತ್ತಿದ್ದಾರೆ. ಆಲ್ಲಿ ಎಫಿಡಮಿಕ್ ಗ್ಯಾಸ್ಟ್ರೊ ಎಂಟ್ರೀಸ್, ಕಾಲರಾ ಇತ್ಯಾದಿ

ರೋಗಗಳು ಹರಡಿವೆ. ಎಫಿಡಮಿಕ್ ಫಾರ್ಮ್‌ಲ ಸೈಡ್ ಆಗುವವರೆಗೆ ಸರ್ಕಾರ ಕ್ರಮ ತೆಗೆದುಕೊಳ್ಳ ಬಾರದೆಂದು ಏನಾದರೂ ತೀರ್ಮಾನ ಮಾಡಿದೆಯೆ? ಅಶುದ್ಧ ನೀರನ್ನು ಸರಬರಾಜು ಮಾಡಲು ಕಾರಣವೇನು ಅಂದರೆ ಮಡಕೇರಿ ನಗರದಲ್ಲಿ ಜನಸಂಖ್ಯೆ ಜಾಸ್ತಿಯಾಗಿರುವುದರಿಂದ ಬರತಕ್ಕ ನೀರು ಕಡಿಮೆಯಾಗಿದೆ ಎಂದು ಹೇಳಿದ್ದೀರಿ. ಆದರೆ ಈ ಮಾಹಿತಿಯನ್ನು ಏತಕ್ಕೆ ಕೊಟ್ಟರು ಎಂದು ಗೊತ್ತಿಲ್ಲ ಈ ನೀರು ಸರಬರಾಜು ಯೋಜನೆಯನ್ನು ತಯಾರಿಸಿದ ಅಧಿಕಾರಿಗಳು ಏನಾದರೂ ತಿಳಿದುಕೊಂಡಿದ್ದಾರೆಯೇ ಅಥವಾ ಇಲ್ಲವೆ? ಏನೂ ಗೊತ್ತಿಲ್ಲದೆ ಇದ್ದರೆ ನನ್ನ ಹತ್ತಿರ ಬರಲಿ, ಹೇಳಿಕೊಡುತ್ತೇನೆ. ಮಡಕೇರಿ ನಗರದ ಜನಸಂಖ್ಯೆ ಈಗ ಇರತಕ್ಕದ್ದು ೨೪ ಸಾವಿರ. ಈ ಯೋಜನೆಯನ್ನು ತಯಾರಿಸಿದಾಗ ಮಡಕೇರಿ ನಗರದ ಜನಸಂಖ್ಯೆ ೩೫ ಸಾವಿರವಾದರೂ ನೀರು ಕೊಡಲಿಕ್ಕೆ ಬರುತ್ತದೆಂದು ತಯಾರಿಸಿದ್ದಾರೆ. ಆದರೆ ಈ ನೀರಿನ ಪ್ರಮಾಣ ಯಾವ ಕಾರಣದಿಂದ ಕಡಿಮೆಯಾಯಿತೆಂದರೆ ಅಲ್ಲಿ ಪಂಪಿಂಗೇ ಸರಿಯಾಗಿ ಆಗುತ್ತಿಲ್ಲ. ೨೪ ಸಾವಿರ ಗ್ಯಾಲನ್ ನೀರು ಬರಬೇಕಾದ ಕಡೆ ಕೇವಲ ೧೦ ಸಾವಿರ ಗ್ಯಾಲನ್ ಮಾತ್ರ ಬರುತ್ತಿದೆ. ಇದಕ್ಕೆ ಇನ್ನೂ ಒಂದು ಕಾರಣ ಅಲ್ಲಿ ಹೂಳು ತುಂಬಿಕೊಂಡಿರುವುದು. ಹೂಳಿನ ಪ್ರಮಾಣ ಹೆಚ್ಚಾಗಿರುವುದರಿಂದ ನೀರಿನ ಪ್ರಮಾಣ ಕೇವಲ ೨ ತಿಂಗಳಲ್ಲಿ ಕಡಿಮೆಯಾಗುತ್ತದೆ. ಆದ್ದರಿಂದ ಜನಸಂಖ್ಯೆ ಹೆಚ್ಚಾಗಿರುವುದರಿಂದ ನೀರಿನ ಪ್ರಮಾಣ ಕಡಿಮೆಯಾಗಿವೆ ಎಂದು ಹೇಳುವ ಮಾತು ಸರಿಯಲ್ಲ ಆದ್ದರಿಂದ, ದಯಮಾಡಿ ಅಧಿಕಾರಿಗಳನ್ನು ಕರೆಸಿ ಅವರಿಗೆ ಈ ಬಗ್ಗೆ ಸೂಕ್ತ ತಿಳುವಳಿಕೆ ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ನೀರನ್ನು ಶುದ್ಧಿಕರಿಸದೆ ಜನರಿಗೆ ಸರಬರಾಜು ಮಾಡುವುದು ಸರಿಯೆ? ಹೀಗೆ ಮಾಡುವುದಕ್ಕೆ ಬದಲು ಮಡಕೇರಿ ಜನರನ್ನು ಕೊಂದರೆ ಒಳ್ಳೆಯದು. ನಾವಾತೂ ಮಡಕೇರಿ ನಗರದ ನೀರು ಕುಡಿಯುವುದನ್ನೇ ಬಿಟ್ಟುಬಿಟ್ಟಿದ್ದೇನೆ

(ಗೊಂದಲ)

ಶ್ರೀ ಎಂ.ಸಿ. ನಾನಯ್ಯ.—ನಮಗೂ ಅವರಿಗೂ ಇರುವ ವ್ಯತ್ಯಾಸ ಇಷ್ಟೆ. ನಮ್ಮದು ಬೆಳ್ಳಿ ಕಪ್ಪು. ಅವರದ್ದು ಗಾಜಿನ ಕಪ್ಪು.

ಶ್ರೀ ಬೇಗಾನೆ ರಾಮಯ್ಯ.—ಮಡಕೇರಿಯ ಜನ ನೀರು ಕುಡಿಯುತ್ತಿದ್ದಾರೆ.

ಶ್ರೀ ಎಂ.ಸಿ. ನಾನಯ್ಯ.—ನೀರನ್ನು ಕುಡಿಯುತ್ತಾರೆ. ಇನ್ನೊಂದು ಕುಡಿಯುತ್ತಾರೆ, ಆದರೆ ನೀವು ಕುಡಿಯುವ ನೀರಿನ ಮಟ್ಟ ಜಾಸ್ತಿ. ಆದುದರಿಂದ, ನಾನು ಈ ಬಗ್ಗೆ ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ, ನಾನೇನು ಮಡಕೇರಿ ನಗರದಲ್ಲಿ ಪ್ರಚಾರ ಮಾಡುವುದಕ್ಕೆ ಹೋಗುವುದಿಲ್ಲ. ಮೊದಲು ಅಧಿಕಾರಿಗಳನ್ನು ಕರೆಸಿ ಅಲ್ಲಿ ನಡೆಯುತಕ್ಕ ಅವ್ಯವಹಾರಗಳನ್ನು ನಿಲ್ಲಿಸಿ ಎಂದು. ಒಟ್ಟಿನಲ್ಲಿ. ನಾನು ಕೇಳಿಕೊಳ್ಳುವುದು ಇಷ್ಟೆ. ನೀರನ್ನು ಶುದ್ಧಿಕರಿಸಿ ಜನರಿಗೆ ಸರಬರಾಜು ಮಾಡತಕ್ಕ ವ್ಯವಸ್ಥೆಯನ್ನು ಮಾಡಬೇಕು, ಮತ್ತು ಅಲ್ಲಿ ತುಂಬಿಕೊಂಡಿರತಕ್ಕ ಹೂಳನ್ನು ತೆಗೆಸಿ ಸಾಕಷ್ಟು ನೀರು ಸರಬರಾಜಾಗತಕ್ಕ ವ್ಯವಸ್ಥೆ ಆಗಬೇಕು ಮತ್ತು ಕ್ಲೋರಿನೇಷನ್ ಪ್ಲಾಂಟನ್ನು ತರಿಸಿ ನೀರನ್ನು ಕ್ಲೋರಿನೇಷನ್ ಮಾಡಬೇಕೆಂದು ಹೇಳುತ್ತೇನೆ. ಇಲ್ಲದಿದ್ದರೆ, ಜನರೆಲ್ಲ ಕೂಡಿ ಸತ್ಯಾಗ್ರಹ ಮಾಡುವಂತೆ ನಾನೇ ಮುಂದಾಳಾಗಿ ಕರೆ ಕೊಡುತ್ತೇನೆಂಬ ಎಚ್ಚರಿಕೆಯನ್ನು ಸರ್ಕಾರಕ್ಕೆ ಕೊಡುತ್ತೇನೆ.

ಶ್ರೀ ಬೇಗಾನೆ ರಾಮಯ್ಯ.—ಮಾನ್ಯ ಸದಸ್ಯರ ಕಳಕಳಿ ಅರ್ಥವಾಗಿದೆ. ಅಲ್ಲಿ ಈಗಾಗಲೇ ಜನಸಂಖ್ಯೆ ಕೂಡ ಏರಿದೆ. ಆ ಜನಸಂಖ್ಯೆಗೆ ಸಾಕಾಗುವಷ್ಟು ನೀರನ್ನು ಒದಗಿಸುವ ಸಲುವಾಗಿ ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅವೆಲ್ಲಕ್ಕೂ ಸರ್ಕಾರ ಒಪ್ಪಿಗೆ ನೀಡಿದೆ. ಎಲ್ಲ ಕೆಲಸಗಳನ್ನು ಪ್ರಾರಂಭಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ನೀಡಿದ್ದೇವೆ. ಮಾನ್ಯ ಸದಸ್ಯರು ಪ್ರಾಸ್ತಾಪಿಸಿದ ಮಹತ್ವದ ವಿಷಯಗಳನ್ನು ಕೂಡ ಗಮನಿಸಿದ್ದೇನೆ. ಸಂಬಂಧಪಟ್ಟ ಎಲ್ಲ ಅಧಿಕಾರಿಗಳನ್ನು ಕರೆದು ಸೂಚನೆ ನೀಡಿ ಅತ್ಯಂತ ತೀವ್ರ ಗತಿಯಲ್ಲಿ ಆ ಕೆಲಸವನ್ನು ತೆಗೆದುಕೊಂಡು ಮುಗಿಸಿಕೊಡುತ್ತೇನೆ.

PRESENTATION OF REPORT

Fifth Report of the Committee on Estimates

SRI S.M. SHEERNALY CHANDRASHEKAR.—Sir, I present the 5th Report of the Committee on Estimates on Fisheries Depart t

MR. DEPUTY SPEAKER.—The Report is presented.